ಪ್ರವಾಸೋದ್ಯಮ ತಾಣಗಳ ಬಗ್ಗೆ

110(1693); ಶ್ರೀ ರಾಜ ವೆಂಕಟಪ್ಪ ನಾಯಕ (ಸುರಪುರ)

ಅ) ಶೋರಾಪುರ ತಾಲ್ಲೂಕಿನಲ್ಲಿ ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸ್ಥಳಗಳು ಯಾವುವು;

ಆ) ಈ ಸ್ಥಳಗಳಲ್ಲಿ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ;

ಇ) ಈ ಸ್ಥಳಗಳ ಅಭಿವೃದ್ಧಿಗಾಗಿ ಸರ್ಕಾರ ಖರ್ಚು ಮಾಡಿರುವ ಅನುದಾನ ಎಷ್ಟು? (ವಿವರ ನೀಡುವುದು)

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು)

ಅ) ಸುರಪುರ ತಾಲ್ಲೂಕಿನ ಬೋನಾಳ ಪಕ್ಷಿಧಾಮ, ರಾಜಾ ವೆಂಕಟಪ್ಪನಾಯಕನ ಕೋಟೆ ಮತ್ತು ಅರಮನೆ ಪ್ರದೇಶಗಳನ್ನು ಪ್ರವಾಸಿ ತಾಣಗಳಾಗಿ ಗುರುತಿಸಲಾಗಿದೆ.

Bonal Birds Sanctuary, Raja Venkatappa fort and Palace area have been identified as tourists destination in Surpur taluk.

ಆ) ಮತ್ತು ಇ) ಈ ಸ್ಥಳಗಳಲ್ಲಿ ಕೈಗೊಂಡಿರುವ ಕಾಮಗಾರಿಗಳು ಹಾಗೂ ಖರ್ಚು ಮಾಡಿರುವ ಅನುದಾನದ ವಿವರ ಕೆಳಗಿನಂತಿದೆ.

The works under taken and expenditure incurred to develop these places is furnished below.

(₹ ಲಕ್ಷಗಳಲ್ಲಿ)

1	ಬೋನಾಳ ಕೆರೆ ಅಭಿವೃದ್ಧಿ	50.00
2	ಬೋನಾಳ ಪಕ್ಷಿಧಾಮ ಅಭಿವೃದ್ಧಿ	100.00
3	ಸುರಪುರದಿಂದ ಬೋನಾಳ ಪಕ್ಷಿಧಾಮಕ್ಕೆ ರಸ್ತೆ ಅಭಿವೃದ್ಧಿ	300.00
	ಒಟ್ಟು	450.00

₹ in lakhs

1	Bonal lake development	50.00
2	Bonal Bird Sanctuary development	100.00
3	Surpur to Bonal Bird sanctuary road development	300.00
	Total	**450.00**

ಶ್ರೀ ಕೆ.ಎನ್. ರಾಜಣ್ಣ [ಮಾನ್ಯ ಸದಸ್ಯರಾದ ಶ್ರೀ ರಾಜ ವೆಂಕಟಪ್ಪ ನಾಯಕರವರ ಪರವಾಗಿ]:– ಉತ್ತರ ಕೊಟ್ಟಿರುವುದು ಪ್ರಥಮ ಅರ್ಧದಲ್ಲಿ ಏನು ಹೇಳಿದ್ದಾರೆಂದರೆ, ಸುರಪುರ ತಾಲ್ಲೂಕಿನ ಬೋನಾಳ ಪಕ್ಷಿಧಾಮ, ರಾಜಾ ವೆಂಕಟಪ್ಪನಾಯಕನ ಕೋಟೆ ಮತ್ತು ಅರಮನೆ ಪ್ರದೇಶಗಳನ್ನು ಪ್ರವಾಸಿ ತಾಣಗಳಾಗಿ ಗುರುತಿಸಲಾಗಿದೆ ಎಂದು ಕೊಟ್ಟಿದ್ದಾರೆ. ಇಲ್ಲಿ ಯಾವ್ಯಾವ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಂಡಿದ್ದಾರೆಂದರೆ ಬೋನಾಳ ಕೆರೆ ಅಭಿವೃದ್ಧಿ ಮತ್ತು ಸುರಪುರದಿಂದ ಬೋನಾಳ ಪಕ್ಷಿಧಾಮಕ್ಕೆ ರಸ್ತೆ ಅಭಿವೃದ್ಧಿ ನಾಲ್ಕುವರೆ ಕೋಟಿ ರೂಪಾಯಿಗಳ ಕೆಲಸ ಮಾಡಿದ್ದೇವೆಂದು ಹೇಳುತ್ತಾರೆ. ಬೇರೆ ಪ್ರವಾಸಿ ತಾಣಗಳಾಗಿ ಗುರುತಿಸಿರುವ ಕೋಟೆ ಮತ್ತು ಅರಮನೆ ಪ್ರದೇಶ ಇವನ್ನೂ ಗುರುತಿಸಿದ್ದಾರೆ ಇವನ್ನು ಅಭಿವೃದ್ಧಿ ಮಾಡಿಲ್ಲ, ಇವನ್ನು ಯಾವಾಗ ಅಭಿವೃದ್ಧಿ ಮಾಡುತ್ತಾರೆನ್ನುವುದನ್ನು ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಅರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಕೋಟೆ ಮತ್ತು ಅರಮನೆ ಪ್ರವಾಸಿ ತಾಣವಾಗಿದೆ, ಇಲ್ಲಿಯ ಅಭಿವೃದ್ಧಿಯನ್ನು ಕ್ರಮೇಣ ಮಾಡಲಾಗುವುದು, ಏಕೆಂದರೆ, ಈಗಾಗಲೇ ಈ ಕ್ಷೇತ್ರದಲ್ಲಿ ನಾವು ಮೂರು ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆ. ಹಾಗಾಗಿ ಆ ಕೋಟೆಯ ಬಗ್ಗೆಗೂ ಸಹ ಪ್ರಸ್ತಾವನೆ ಪ್ರವಾಸೋದ್ಯಮದ ಇಲಾಖೆಯ ಮುಂದಿದೆ, ಕ್ರಮತೆಗೆದುಕೊಂಡು ಕೆಲಸ ಮಾಡಲಾಗುವುದು.